ಮುಂಜಾವು

ವಾರಪತ್ರಿಕೆ.

ಸಂಪಾದಕ: ನಿರಿಮನೆ ನಾಗರಾಜ್

೧೦ನೇ ವರ್ಷ ೨೫ನೇ ಸಂಚಿಕೆ ಬೆಲೆ ೭೦ ಪೈಸೆ

ಕೊಪ್ಪ ೨೧-೭-೧೯೯೧ ಭಾನುವಾರ ದೂರವಾಣಿ : ೭೧೧೪

ಗಿರಿಜನ ರೈತನ ಬಗರ್‌ಹುಕುಂ ಸಾಗುವಳಿ ತೆರವಿಗೆ ಪ್ರಭಾವಿಗಳ ಯತ್ನ, ಕಿರುಕುಳ

ಶೃಂಗೇರಿ : ಬೆಳಂದೂರು ಗ್ರಾಮದ ಸ. ನಂ. ೭೨ರಲ್ಲಿ ಶಂಕರಪ್ಪನಾಯ್ಕ ಎಂಬ ಗಿರಿಜನ ರೈತ ೧೯೭೮ರಿಂದಲೂ ಬಗರ್ ಹುಕುಂ ಸಾಗುವಳಿ ಮಾಡಿ ಗೇರು ನೆಟ್ಟಿರುವ ೩ ಎಕರೆ ಪ್ರದೇಶವನ್ನು ಸಾಮಾಜಿಕ ಅರಣ್ಯ ಯೋಜನೆಯ ಅಧಿಕಾರಿಗಳು ತೆರವು ಮಾಡಿಸಲು ಹವಣಿಸುತ್ತಿದ್ದಾರೆಂದು ಅಂಬಾಭವಾನಿ ಗಿರಿಜನೋದ್ಧಾರ ಸಂಘ ದೂರಿದೆ.

ಈ ಭೂಮಿಗೆ ೮೭ರಲ್ಲಿ ಟಿ. ಟಿ. ಆಗಿದ್ದು, ಅಧಿಕಾರಿಗಳ ಈ ಕಿರುಕುಳವನ್ನು ತಪ್ಪಿಸಿ ರಕ್ಷಣೆ ನೀಡುವಂತೆ ಎಲ್ಲಾ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳಿಗೂ ದೂರಿತ್ತಿದ್ದರೂ ಸಹ, ಸಾ. ಅ. ಯೋ. ಅಧಿಕಾರಿಗಳು ಪ್ರಭಾವಿ ಜಮೀನ್ದಾರರು ಮತ್ತು ರಾಜಕಾರಣಿಗಳ ಮೂಲಕ ಕಿರುಕುಳ ನೀಡುತ್ತಿದ್ದು, ಈ ಬಗ್ಗೆ ಇದೇ ೨೬ರಂದು ಸಂಘದ ಕಾರ್ಯಕಾರಿ ಮಂಡಳಿ ಸಭೆ ನ್ಯಾಯಕ್ಕಾಗಿ ಸೂಕ್ತ ಹೋರಾಟದ ಕ್ರಮ ರೂಪಿಸುವುದೆಂದೂ ಸಂಘ ತಿಳಿಸಿದೆ.

ಶೃಂಗೇರಿ ವ್ಯ.ಸೇ.ಸ. ಸಂಘಕ್ಕೆ ನೂತನ ಅಧ್ಯಕ್ಷ

(ವರದಿ : ಕಲ್ಕುಳಿ ವಿಠಲ ಹೆಗ್ಡೆ)

ಶೃಂಗೇರಿ : ಇಲ್ಲಿನ ವ್ಯವಸಾಯ ಸೇವಾ ಸಹಕಾರ ಸಂಘಕ್ಕೆ (ಹಿಂದಿನ ಶಾರದಾ ಕೋ ಆಪರೇಟಿವ್ ಸೊಸೈಟಿ) ನೂತನ ಅಧ್ಯಕ್ಷರಾಗಿ ಡಿ. ಎಸ್. ರವೀಶ್ ಆಯ್ಕೆಯಾಗಿದ್ದಾರೆ.

ಕಳೆದ ೧೨ ವರ್ಷಗಳಿಂದಲೂ ಒಂದೇ ಕುಟುಂಬದವರೇ ಅಧ್ಯಕ್ಷ ಪದವಿ ಹಿಡಿದುಕೊಂಡಿದ್ದು, ಸಂಘ ಯಾವುದೇ ರೀತಿ ಅಭಿವೃದ್ಧಿ ಸಾಧಿಸಿರಲಿಲ್ಲ. ಅವ್ಯವಹಾರದ ಗುಸುಗುಸು ಕೂಡ ಇತ್ತು. ಈಗ ಒಂದು ರೀತಿಯಲ್ಲಿ ಪಟ್ಟಭದ್ರ ಹಿಡಿತ ತಪ್ಪಿದಂತಾಗಿ, ಆಡಳಿತ ಮಂಡಳಿ ಉತ್ಸಾಹಿ ಯುವಕರ ಕೈಗೆ ಬಂದಿದ್ದು, ಸಂಘದ ಮುಂದಿನ ಬೆಳವಣಿಗೆ ಹೇಗಾಗುತ್ತದೆ-ಕಾದು ನೋಡಬೇಕು.

"ಪರಸ್ಪರ ಸಹಕಾರ, ಸೌಹಾರ್ದ"ಕ್ಕೆ ನಿರ್ಣಯ : ಬೆಳವಿನಕೊಡಿಗೆ ಶಾಲೆ ಪುನಃ ಆರಂಭ

ಬೆಳವಿನಕೊಡಿಗೆ : ಜು ೫ರಿಂದ ಮುಚ್ಚಿದ್ದ ಇಲ್ಲಿನ ಹಿರಿಯ ಪ್ರಾಥಮಿಕ ಶಾಲೆ ಜು ೧೮ ರಂದು ಗ್ರಾಮಸ್ಥರ ಮತ್ತು ಅಧ್ಯಾಪಕ ವೃಂದದವರ ಮಧ್ಯೆ 'ಸಂಧಾನ' ನಡೆದ ಫಲವಾಗಿ ಪುನಃ ತೆರೆದಿದೆ.

ಮೊದಲಿದ್ದ ಮುಖ್ಯೋಪಾಧ್ಯಾಯರಾದ ಟಿ. ಬಸಪ್ಪ ಅವರ ಮೇಲೆ ಗ್ರಾಮಸ್ಥರ ಒಂದು ಗುಂಪು ಜು ೫ ರಂದು ಹಲ್ಲೆ ನಡೆಸಿದ್ದರ ಫಲವಾಗಿ ಅಂದಿನಿಂದ ಶಾಲೆ ಮುಚ್ಚಿದ್ದನ್ನು ಇಲ್ಲಿ ಸ್ಮರಿಸಬಹುದ.

ಜು. ೧೭ ರಂದು ತೀರ್ಥವಿನಕೊಪ್ಪ ಮಂಡಲ ಪ್ರಧಾನ ಎಚ್ ಎಸ್ ಜಯಪ್ರಕಾಶ್, ಕೊಪ್ಪದ ಪಿ ಬಿ ವಿವೇಕ್ ಮತ್ತು ಜಿ. ಡಿ. ಪರಮೇಶ್ವರ ಇವರುಗಳ ಮಧ್ಯಸ್ಥಿಕೆಯಲ್ಲಿ ಸಂಧಾನ ಸಭೆ ನಡೆಯಿತು. ಶಿಕ್ಷಕರ ಸಂಘದ ಜಿಲ್ಲಾ ಅಧ್ಯಕ್ಷರು, ಖಜಾಂಚಿ ಮತ್ತು ತಾ|| ಘಟಕದ ಪದಾಧಿಕಾರಿಗಳು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮಸ್ಥರು ಸಭೆಯಲ್ಲಿ ಹಾಜರಿದ್ದರು.

ಸಭೆಯಲ್ಲಿ ಮಾತನಾಡಿದ ಎರಡೂ ಕಡೆಯವರು "ಆಗಿ ಹೋದ ಘಟನೆ"ಯ ಬಗ್ಗೆ ವಿಷಾದಿಸಿದರಲ್ಲದೆ, ಮಕ್ಕಳ ಹಿತದೃಷ್ಟಿಯಿಂದ ಇನ್ನು ಮುಂದೆ ಇಂಥ ಘಟನೆಗಳಾಗದಂತೆ "ಸಹಕಾರ ಮತ್ತು ಸೌಹಾರ್ದದಿಂದ ನಡೆದುಕೊಳ್ಳಲು" ನಿರ್ಧರಿಸಿದರು. ಪೋಲೀಸ್ ಇಲಾಖೆಯವರೂ ಈ ಸಭೆಯಲ್ಲಿ ಭಾಗವಹಿಸಿದ್ದರು.

ಕಾಫಿ ಸಂಶೋಧನಾ ಕೇಂದ್ರದಿಂದ ಬಿ. ಎನ್ ನವಿಲೇಕರ್ ಎಂಬವರನ್ನು ಇಲ್ಲಿಗೆ ಮುಖ್ಯೋಪಾಧ್ಯಾಯರಾಗಿ ನಿಯೋಜಿಸಲಾಗಿದೆ. ಅವರು ಈ ಹಿಂದೆಯೂ ಈ ಶಾಲೆಯಲ್ಲಿದ್ದವರು. ಚಂದ್ರಶೇಖರ ಭಟ್ ಎಂಬ ಇನ್ನೊಬ್ಬ ಅಧ್ಯಾಪಕರನ್ನೂ ನೇಮಿಸಲಾಗಿದೆ.

ಆದರೆ ಇಲ್ಲಿದ್ದ ಮೂವರು ಅಧ್ಯಾಪಕರನ್ನೂ ಬೇರೆ ಕಡೆಗಳಿಗೆ ತಾತ್ಕಾಲಿಕ ವರ್ಗಾವಣೆ ಮಾಡಲಾಗಿದೆ. ಈಗ ಇಲ್ಲಿನ ಏಳು ತರಗತಿಗಳಿಗೆ ಕೇವಲ ಇಬ್ಬರು ಅಧ್ಯಾಪಕರು ಮಾತ್ರ ಇದ್ದಂತಾಗಿದೆ.

ಹಲ್ಲೆಯ ಬಗೆಗಿನ ಪೋಲೀಸ್ ಕೇಸನ್ನು ಕೋರ್ಟಿನಲ್ಲಿ ಹಿಂತೆಗೆದುಕೊಳ್ಳುವ ವಿಚಾರವೇನೂ ಸಂಧಾನ ಸಭೆಯಲ್ಲಿ ಪ್ರಸ್ತಾಪವಾಗಿಲ್ಲ.

ಇತ್ತ, ಇದೇ ಹಿನ್ನೆಲೆಯಲ್ಲಿ ಶೃಂಗೇರಿ ರಸ್ತೆ ಭಾಗ್ಯಶ್ರೀ ಮಾಲಿಕ ಲಕ್ಷ್ಮೀರಮಣ ಅವರ ಮೇಲೆ ನಡೆದ ಹಲ್ಲೆಯ ಬಗ್ಗೆಯೂ ಕೇಸು ಮುಂದುವರಿದಿದೆ. ಆದರೆ ಈವರೆಗೆ ಪೋಲೀಸರು ಯಾರನ್ನೂ ಬಂಧಿಸಿಲ್ಲ. ದೂರಿನಲ್ಲಿ ಹೆಸರಿಸಲಾಗಿರುವ ಹಾಲಗಾರಿನ ಅಣ್ಣಪ್ಪ ಎಂಬವರು ಕೊಪ್ಪ ಕೋರ್ಟಿನಲ್ಲಿ ನಿರೀಕ್ಷಣಾ ಜಾಮೀನು ಪಡೆದಿರುವುದಾಗಿ ಹೇಳಲಾಗಿದೆ.

ಸಹಕಾರ ಸಂಘದ ಗಾದಿಗೆ ಕಾಂಗ್ರೆಸ್ ಲಗ್ಗೆ ವಿಫಲ: ಅತ್ತಿಕೊಡಿಗೆ ಸಂಘಕ್ಕೆ ದಳದ ಅಧ್ಯಕ್ಷರು

ಬಿಳಾಲ್‌ಕೊಪ್ಪ : ಇಲ್ಲಿನ ಅತ್ತಿಕೊಡಿಗೆ ವ್ಯ. ಸೇ. ಸ. ಸಂಘದ ಅಧ್ಯಕ್ಷಗಾದಿಗೆ ಕಾಂಗ್ರೆಸ್‌ನವರು ಹಾಕಿದ ಲಗ್ಗೆ ವಿಫಲಗೊಂಡು, ಜನತಾ ದಳದ ಬೆಂಡೆಹಕ್ಲು ರಾಮಚಂದ್ರಯ್ಯ ಕಾಂಗ್ರೆಸ್ಸಿನ ಎಚ್. ವಿ. ಸುಂದರ ಮೂರ್ತಿ ಅವರನ್ನು ೭-೫ ರಲ್ಲಿ ಸೋಲಿಸಿ, ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಈ ವರ್ಷದ ಏಪ್ರಿಲ್ ೧೨ರಂದು ದಳದ ಬೆಂಬಲಿಗರಾದ ಆರ್ಥರ್ ಡಿ'ಸೋಜ, ಅಪ್ಪು ಆಚಾರಿ ಮತ್ತು ಬಿ.ಕೆ.ಬೊಮ್ಮಯ್ಯ ಇವರುಗಳನ್ನು ನಿರ್ದೇಶಕರಾಗಿ ಸರ್ಕಾರ ನಾಮಕರಣ ಮಾಡಿದ್ದು, ಆ ಆಜ್ಞೆ ಸಂಘಕ್ಕೆ ಮೇ ೨೫ರಂದು ತಲುಪಿತ್ತು. ಆದರೆ ಕಾಂಗ್ರೆಸ್‌ನವರು ಜುಲೈ ೮ರಂದು ಈ ನಾಮಕರಣ ರದ್ದು ಮಾಡಿಸಿ, ತಮ್ಮ ಬೆಂಬಲಿಗರಾದ ಫೆಲಿಕ್ಸ್ ಮೊಂತೇರೋ, ಎಂ. ಮಹಮದ್ ಕುಟ್ಟಿ ಮತ್ತು ಕೋಟೆತೋಟದ ಭೈರಯ್ಯ ಇವರುಗಳನ್ನು ನಾಮಕರಣ ಮಾಡಿಸಿದರು.

ಈ ಆಜ್ಞೆ ಜು. ೧೦ರ ಬೆಳಿಗ್ಗೆ ಜಿಲ್ಲಾ ಉಪನಿಬಂಧಕರಿಂದ ಸಂಘಕ್ಕೆ ತಲುಪಿತು. ಅಂದೇ ನೂತನ ಅಧ್ಯಕ್ಷರ ಚುನಾವಣೆ ಆಗಬೇಕಿತ್ತು. ಚುನಾವಣೆಗೆ ಎ ಜಿ. ಬಲರಾಂ ಎಂಬ ಸ|| ಸಂಘಗಳ ಹಿರಿಯ ನಿರೀಕ್ಷಕರನ್ನು ವೀಕ್ಷಕರಾಗಿ ಕಳಿಸುವ ಅಸಾಧಾರಣ ಕ್ರಮವನ್ನೂ ಉ. ನಿ. ತೆಗೆದುಕೊಂಡಿದ್ದರು.

ಆದರೂ ಕಾಂಗ್ರೆಸ್‌ನವರ 'ಜಿಸಿ' ಚೆನ್ನಾಗಿರಲಿಲ್ಲವೇನೋ-ಮೊಂತೇರೋ ಮತ್ತು ಭೈರಯ್ಯ ತಮ್ಮ ನಾಮಕರಣದ ವಿಚಾರವೇ ಗೊತ್ತಿಲ್ಲದೆ ಊರಿಗೆ ಹೋಗಿದ್ದವರು ಇನ್ನೂ ಬಂದಿರಲಿಲ್ಲ. ಅಧ್ಯಕ್ಷ ಚುನಾವಣೆಯಲ್ಲಿ ದಳದವರಿಗೇ ಜಯವಾಯಿತು.

ಕಾಂಗ್ರೆಸ್‌ಗೆ ಬಹುಮತವಿದ್ದೂ, ಅವರ ವಿರೋಧಿಗಳು ಸಂಘದ ಅಧ್ಯಕ್ಷರಾಗಿರುವುದು ಕೊಪ್ಪ ತಾಲ್ಲೂಕಿನಲ್ಲಿ ಇದು ಮೂರನೆಯದೆನ್ನಬಹುದು. (ಹೇರೂರು ಮತ್ತು ಕೆಸವೆ ಇನ್ನೆರಡು)

ಕೊಪ್ಪ ಠಾಣಾಧಿಕಾರಿ ಅಧಿಕಾರ ಸ್ವೀಕಾರ

ಕೊಪ್ಪ: ಇಲ್ಲಿನ ಪೋಲೀಸ್ ಠಾಣಾಧಿಕಾರಿಯಾಗಿ ಮೂಡಿಗೆರೆಯಲ್ಲಿದ್ದ ಎಚ್. ಮುರಿಗೆಪ್ಪ ಜು ೧೮ರಂದು ಅಧಿಕಾರ ವಹಿಸಿಕೊಂಡಿದ್ದಾರೆ. ಇವರು ಎಂ. ಎ ಪದವೀಧರರು.

ಶೃಂಗೇರಿ: ನೆಮ್ಮಾರು ಬಳಿ ಮೇ ೨೧ರಂದು ದರೋಡೆ ಎಸಗಿದ್ದ ೬ ಮಂದಿಗೆ ಕೊಪ್ಪ ಕೋರ್ಟ್ ಜಾಮೀನು ತಿರಸ್ಕರಿಸಿದೆ.

"ರಾಜಕೀಯ ಹಿತಾಸಕ್ತಿಯ ಕಾಮಗಾರಿ" : ಆರೋಪ

ಸೀತೂರು : ೧೦-೧೫ ಮನೆಗಳ ಗುಂಪುಗಳು ಈ ಮಂಡಲದಲ್ಲಿ ಹಲವಾರು ಇದ್ದು, ಎಲ್ಲೆಡೆಯೂ ಕುಡಿವ ನೀರಿನ ಬೇಡಿಕೆ ತೀವ್ರವಾಗಿದ್ದರೂ ಸಹ, ಅದನ್ನೆಲ್ಲ ಕಡೆಗಣಿಸಿ, ಕಾನೂರು ಗ್ರಾಮದ ಬೆಳ್ಳೂರಿನಲ್ಲಿ ಪ್ರಧಾನಿಯೊಬ್ಬರ ಮೂವರು ಆಳುಗಳು ಮಾತ್ರ ವಾಸವಾಗಿರುವ ಸ್ಥಳದಲ್ಲಿ ಬಾವಿಯೊಂದನ್ನು ತೋಡಿಸಿರುವುದನ್ನು ಮಂಡಲ ಉಪಪ್ರಧಾನ ಬಿ ಕೆ. ನಾರಾಯಣ ಸ್ವಾಮಿ ತೀವ್ರವಾಗಿ ಖಂಡಿಸಿದ್ದಾರೆ.

ಸದರಿ ಜಾಗದ ಬದಲು ಅದೇ ಗ್ರಾಮದ ಹಂತ್ವಾನಿಯಲ್ಲಿ ಸುಮಾರು ೧೦-೧೫ ಮನೆಗಳವರು ಕುಡಿವ ನೀರಿಗೆ ಪರದಾಡುತ್ತಿದ್ದು, ಅಲ್ಲಿ ಒಂದು ಕೊಳವೆ ಬಾವಿ ತೋಡಿಸುವಂತೆ ಕೋರಿ ತಾನು ನ ರಾ. ಪುಪಡ ಜಿ. ಪ ಇಂಜಿನಿಯರ್ ಮಲ್ಲಿಕಾರ್ಜುನಯ್ಯ ಅವರಿಗೆ ೨೧-೩-೯೧ರಲ್ಲಿ ಬರೆದ ಪತ್ರಕ್ಕೆ ಅವರು, "ಯಾವುದೇ ಕೊಳವೆ ಬಾವಿಯ ಸ್ಥಳ ಬದಲಾವಣೆಗೆ ಮೇಲಧಿಕಾರಿಗಳು ಅಥವಾ ಜಿ ಪ. ಅನುಮತಿ ಇದ್ದರೆ ಮಾತ್ರ ಸಾಧ್ಯ. ನೀವು ಹೇಳಿದ ಮಾತ್ರಕ್ಕೆ ಬದಲಾಯಿಸಲು ಸಾಧ್ಯವಿಲ್ಲ" ಎಂದು ಉಡಾಫೆ ಉತ್ತರ ಬರೆದಿದ್ದಾರೆ. ಅಲ್ಲದೆ, ನಾವು ಸೂಚಿಸಿದ ಸ್ಥಳದಿಂದ ೧೦೦ ಮೀಟರ್ ಒಳಗೆ ಒಂದು ಕೊಳವೆ ಬಾವಿ ಮತ್ತು ಒಂದು ತೆರೆದ ಬಾವಿ ಇದೆ ಎಂದಿದ್ದಾರೆ. ಆದರೆ ಸದರಿ ತೆರೆದ ಬಾವಿ ಬಹಳ ಹಳೆಯದಾಗಿದ್ದು, ಅದರಲ್ಲಿ ಜನವರಿ ನಂತರ ನೀರಿರುವುದಿಲ್ಲ. ಅಲ್ಲಿರುವ ಕೊಳವೆ ಬಾವಿ ಮೊದಲೇ ವಿಫಲವಾಗಿದೆ. ಅದನ್ನೇ ಆಳ ಮಾಡುವಂತೆ ಈ ಹಿಂದೆಯೇ ಮಂಡಲ ಪಂಚಾಯ್ತಿ ನಿರ್ಣಯಿಸಿದ್ದರೂ ಅದನ್ನೂ ಮಾಡಿಲ್ಲ ಎಂದು ನಾರಾಯಣ ಸ್ವಾಮಿ ತಿಳಿಸಿದ್ದಾರೆ.

ಬೆಳ್ಳೂರಿನ ಸದರಿ ಬಾವಿಗೆ ಸ್ಥಳೀಯರಿಂದ ಕೋರಿಕೆ ಬಂದಿರಲಿಲ್ಲ. ಗ್ರಾಮ ಸಭೆಯಲ್ಲೂ ಪ್ರಸ್ತಾಪವಾಗಿಲ್ಲ, ಗ್ರಾಮದ ಕಾರ್ಯಶೀಲ ಯೋಜನೆಯಲ್ಲೂ ಸೇರಿಲ್ಲ. ಸೇರಿದ್ದರೂ ಗ್ರಾಮದ ಅಧ್ಯಕ್ಷರ ಜೊತೆಗೆ ಚರ್ಚಿಸಬೇಕಿತ್ತು, ಅಥವಾ ಸಭೆಯಲ್ಲಿ ತಿಳಿಸಬೇಕಿತ್ತು. ಆದರೂ ಬಾವಿ ಮಾಡಿದ್ದಾರೆ. ಹೋಗಲಿ ಎಂದರೆ, ಜಿಪ ಕೇಳುತ್ತಿರುವ, ಅಕ್ಕಪಕ್ಕವಿರುವ ಜಾಗಕ್ಕೆ ಬೇರೊಂದು ಬಾವಿಯನ್ನು ಮಾಡಿಲ್ಲ ಎಂದು ಉಪಪ್ರಧಾನರು ತಿಳಿಸಿದ್ದಾರೆ.

ನಾವು ಕೋರಿಸಿದ ಜಾಗ ಈಗಿರುವ ಎರಡು ನಿರುಪಯುಕ್ತ ಬಾವಿಗಳಿಂದ ಸುಮಾರು ೩೦೦-೪೦೦ ಮಿ. ದೂರವಿದೆ. ಒಂದು ವೇಳೆ ಇಂಜಿನಿಯರ್ ಹೇಳುವಂತೆ ೧೦೦ ಮಿ. ಒಳಗೇ ಇದ್ದಿದ್ದರೂ ಮಂಡಲದ ಕಡೆಯಿಂದ ಬೇರೆ ಜಾಗ ತೋರಿಸಲು ಕೇಳಬಹುದಿತ್ತು. ಎಲ್ಲವನ್ನೂ ಕಡೆಗಣಿಸಿ ಈ ರೀತಿ ವಿಶೇಷವಾಗಿ ಬಾವಿ ತೋಡಿಸಿರುವುದು ಕೇವಲ ರಾಜಕೀಯ ಹಿತಾಸಕ್ತಿ ಮಾತ್ರ ಎಂದು ನಾರಾಯಣ ಸ್ವಾಮಿ ಆರೋಪಿಸಿದ್ದಾರೆ.

ಅನುಮಾನ

● ಸಾವಿತ್ರಿ, ನ.ರಾ. ಪುರ, 'ಜಾಗೃತಿ'

"ಜಾಗೃತಿ" ಈಚೆಗೆ ಅಸಗೋಡಿನಲ್ಲಿ ನಡೆಸಿದ ತನ್ನ ಮಾಸಿಕ ಸಭೆಯಲ್ಲಿ ಚರ್ಚಿಸಿದ ವಿಚಾರದ ಸಂಕ್ಷಿಪ್ತ ರೂಪ.

ಅನುಮಾನ ಅಥವಾ ಸಂಶಯ ಸಾಮಾನ್ಯವಾಗಿ ಎಲ್ಲರಲ್ಲೂ ಇರುತ್ತದೆ. ಆದರೆ ಇದು ಹೆಂಗಸರಲ್ಲಿ ಅತಿ ಹೆಚ್ಚು ಎನ್ನುತ್ತಾರೆ. ಇದು ಸ್ವಲ್ಪಮಟ್ಟಿಗೆ ನಿಜವಿರಬಹುದು. ಹಾಗೂ ಅದಕ್ಕೆ ಕಾರಣವೂ ಇಲ್ಲದಿಲ್ಲ. ಏಕೆಂದರೆ ನಮ್ಮ ಸಮಾಜದಲ್ಲಿ ಸ್ತ್ರೀಯರ ಪಟ್ಟ ನಾಲ್ಕು ಗೋಡೆಗಳ ನಡುವೆ ಎನ್ನುವಂತಾಗಿದೆ. ಆದ್ದರಿಂದ ಮನೆಯಲ್ಲೇ ಇರುವ ಹೆಂಗಸರು ಅಕ್ಕಪಕ್ಕದವರ ಮನೆಗಳಿಗೆ ಬರುವ-ಹೋಗುವವರ ಮೇಲೆ ಗಮನ ಇಡುವುದು, ಅಥವಾ ಇಬ್ಬರು ಹುಡುಗ-ಹುಡುಗಿ ಮಾತನಾಡಿಕೊಂಡರೆ ಇಲ್ಲಸಲ್ಲದ ಸಂಶಯ ತಾಳಿ, ಅಪಪ್ರಚಾರ ಮಾಡುವುದು, ಇತ್ಯಾದಿ ಇಂದೂ ಕೂಡ ಮಹಿಳೆಯರ ದೈನಂದಿನ ವರ್ತನೆಗಳಾಗಿವೆ.

ಅನುಮಾನ ಎನ್ನುವುದು ಒಂದು ಸಲ ಒಬ್ಬ ಮನುಷ್ಯನ ಮನಸ್ಸನ್ನು ಹೊಕ್ಕರೆ ಅದು ಅಷ್ಟು ಸುಲಭದಲ್ಲಿ ಪರಿಹಾರವಾಗುವುದಿಲ್ಲ. ಹಿರಿಯರು ಹೇಳಿದಂತೆ, ಮನುಷ್ಯನಿಗೆ ಯಾವ ರೋಗ ಬಂದರೂ ನಿವಾರಿಸಬಹುದು. ಆದರೆ ಸಂಶಯದ ಭೂತ ಹೊಕ್ಕರೆ ನಿವಾರಿಸಲಾಗುವುದಿಲ್ಲ. 'ಕಾಮಾಲೆ ಕಣ್ಣಿಗೆ ಲೋಕವೆಲ್ಲ ಹಳದಿ' ಎನ್ನುವ ಗಾದೆಯಂತೆ ಅನುಮಾನ ಪಡುವ ಮನುಷ್ಯನಿಗೆ ಬೇರೆಯವರು ಏನು ಮಾಡಿದರೂ ಅನುಮಾನಾಸ್ಪದವಾಗಿಯೇ ಕಾಣುತ್ತದೆ. ಅನುಮಾನ ಪಡುವುದರಲ್ಲಿ ಒಳ್ಳೆಯದೂ ಇದೆ, ಕೆಡುಕೂ ಇದೆ. ಆದರೆ ಕೆಡುಕೇ ಜಾಸ್ತಿ. (ಉದಾ : ಅನುಮಾನಾಸ್ಪದವಾದ ಚಲನವಲನ, ನಡವಳಿಕೆ, ಸನ್ನಿವೇಶ ಮುಂತಾದುವು ಬಯಲಿಗೆ ಬರುವುದು ಈ ಅನುಮಾನ ಪ್ರವೃತ್ತಿಯಿಂದಲೇ ಆದರೆ ಅದು ಬಹುಶಃ ಅತ್ಯಲ್ಪ ಮತ್ತು ಮಿತ ಪ್ರಮಾಣದಲ್ಲಿ, ನಮ್ಮ ಬುದ್ಧಿಯ ಹತೋಟಿಯಲ್ಲಿದ್ದರೆ ಮಾತ್ರ ಒಳಿತು.)

ದ್ವೇಷ, ಹೊಟ್ಟೆಕಿಚ್ಚು ಇದ್ದಲ್ಲಿ ಅನುಮಾನ ಸಾಮಾನ್ಯವಾಗಿ ಇದ್ದೇ ಇರುತ್ತದೆ. ಅನುಮಾನಪಡುವವರು ತಾವು ಸಂತೋಷವಾಗಿರುವುದಿಲ್ಲ; ಇತರರನ್ನೂ ಸಂತೋಷವಾಗಿ ಇರಗೊಡುವುದಿಲ್ಲ. ಅನುಮಾನ ಎನ್ನುವುದು ಅವಿದ್ಯಾವಂತರು, ವಿದ್ಯಾವಂತರೆಂಬ ಭೇದವಿಲ್ಲದೆ ಎಲ್ಲರಲ್ಲೂ ಇರುವುದು.

ಅನುಮಾನ ಪ್ರವೃತ್ತಿ ಗ್ರಾಮಾಂತರ ಪ್ರದೇಶಗಳಲ್ಲಿ, ಅದರಲ್ಲೂ ಮಹಿಳೆಯರಲ್ಲಿ ಹೆಚ್ಚು ಎನ್ನಬಹುದು. ಮನುಷ್ಯ ಚಿಕ್ಕವನಿರುವಾಗ ಅವನು(ಳು) ಸಹಜವಾಗಿ ಇಷ್ಟಪಡುವಂತಹ ಯಾವುದೇ ಚಟುವಟಿಕೆಗಳನ್ನೂ ನಿರಾತಂಕವಾಗಿ ಮಾಡಲು ಬಿಡದೆ ಕಡಿವಾಣ ಹಾಕಿ ಬೆಳೆಸಿದರೆ ಅವನ ಬೌದ್ಧಿಕ ಮತ್ತು ಮಾನಸಿಕ ಬೆಳವಣಿಗೆ ಕುಂಠಿತವಾಗುತ್ತದೆ. ಅವನ ಪ್ರತಿಭೆಯ ವಿಕಸನಕ್ಕೆ ಅವಕಾಶವಿಲ್ಲದೆ, ಮುಂದೆ ಜೀವನದಲ್ಲಿ ಯಾವೊಂದು ಕ್ಷೇತ್ರದಲ್ಲಿಯೂ ಮುಂದುವರಿಯಲಾರದವನಾಗುತ್ತಾನೆ. ತನ್ನ ಯೋಚನೆಗಳಿಗೆ ಸರಿಯಾದ ದಿಕ್ಕಾಗಲಿ ಗುರಿಯಾಗಲಿ ಇಲ್ಲದೆ, ಇಂಥ ಪರಿಸ್ಥಿತಿಯಲ್ಲಿ ಮನುಷ್ಯ ಬಾವಿಯೊಳಗಿನ ಕಪ್ಪೆಯಂತೆ ಬಹಳ ಸಂಕುಚಿತ ಮನೋಭಾವದವನಾಗುತ್ತಾನೆ (ಳೆ)

ಇಂಥ ಸನ್ನಿವೇಶ ಹೆಣ್ಣು ಮಕ್ಕಳಿಗೆ ಮತ್ತು ಹಳ್ಳಿಗಾಡಿನಲ್ಲಿ ಜಾಸ್ತಿ ಎದುರಾಗುವುದರಿಂದ ಅವರಲ್ಲಿ ಅನುಮಾನ ಪ್ರವೃತ್ತಿ ಬೇರೆಲ್ಲರಿಗಿಂತ ಜಾಸ್ತಿ ಕಂಡು ಬರಲು ಕಾರಣವಿರಬಹುದು

ಸ್ತ್ರೀಯರಲ್ಲಿ ಸಂಶಯ ಪ್ರವೃತ್ತಿ ಸ್ವಲ್ಪ ಜಾಸ್ತಿ ಕಂಡು ಬರುವಂತೆಯೇ, ಸಮಾಜದಲ್ಲಿ ಸ್ತ್ರೀಯರ ಕುರಿತೂ ಸಂಶಯ ಪ್ರವೃತ್ತಿ ಜಾಸ್ತಿ. ಸ್ತ್ರೀಗೆ ಸಮಾನತೆ ಇದೆ, ಪುರುಷರಷ್ಟೇ ಹಕ್ಕುಗಳಿವೆ ಎಂದು ಹೇಳುವ ಜನ, ಆಕೆಯನ್ನು ಯಾವತ್ತೂ ಅನುಮಾನದಿಂದಲೇ ಕಾಣುತ್ತಾರೆ. ಆಕೆ ಒಬ್ಬಳೇ ಹೊರಗೆ ಹೊರಟರೂ ಹದ್ದಿನ ಕಣ್ಣಿನಿಂದ ಕಾಯುತ್ತಾರೆ. ನಮ್ಮ ಸಮಾಜದ ಸಂಪ್ರದಾಯವೇ ಹೀಗೆ ಬೆಳೆದು ಬಂದಿದೆ. ಸ್ತ್ರೀಯನ್ನು ವಿನಾಕಾರಣವಾದರೂ ಸಂಶಯಿಸುವ ಇಂಥ ಸಂಪ್ರದಾಯಗಳು ಎಷ್ಟು ಸರಿ ? ಇಂಥ ನಿಷ್ಕಾರಣ ಅನುಮಾನ ಪ್ರವೃತ್ತಿ ಎಂದು ನಿರ್ಮೂಲನವಾಗುವುದೋ ಅಂದು ಮಹಿಳೆಯ ಉದ್ಧಾರ ಖಂಡಿತ ಎನ್ನಬಹುದು.

ಅನುಮಾನವನ್ನು ಬಿಡಲು ಮನುಷ್ಯ ಪ್ರಯತ್ನಿಸಬೇಕು. ಮೆದುಳಿಗೆ ಕೆಲಸ ಕೊಡುವುದರಿಂದ ಅನುಮಾನ ಪ್ರವೃತ್ತಿ ಕಡಿಮೆಯಾಗುತ್ತದೆ. ನಾವು ಹೆಚ್ಚೆಚ್ಚು ತಿಳುವಳಿಕೆ; ವಿಚಾರ ಶಕ್ತಿ ಬೆಳೆಸಿಕೊಳ್ಳಬೇಕು. ಕಥೆ-ಕಾದಂಬರಿ, ಸಿನಿಮಾ ಸುದ್ದಿಗಳನ್ನಷ್ಟೇ ಅಲ್ಲದೆ, ವಿಚಾರವಂತಿಕೆಯನ್ನು ಬೆಳೆಸುವಂತಹ ವಿಷಯಗಳನ್ನೂ ಲೇಖನಗಳನ್ನೂ ಓದುವ ಮತ್ತು ಚರ್ಚಿಸುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು.

ಹಾಗೆಯೇ ನಮ್ಮನ್ನು ಹೆಚ್ಚೆಚ್ಚು ಒಳ್ಳೆಯ ಕೆಲಸಗಳಲ್ಲಿ ತೊಡಗಿಸಿಕೊಳ್ಳಬೇಕು. ಪ್ರತಿಯೊಬ್ಬ ಮಾನವನೂ ಮತ್ತೊಬ್ಬರನ್ನು ವಿಶಾಲ ದೃಷ್ಟಿಯಿಂದ, ವಿಶ್ವಾಸದಿಂದ ನೋಡಬೇಕು; ದ್ವೇಷ, ಹೊಟ್ಟೆಕಿಚ್ಚಿನಿಂದಲ್ಲ. ಎಲ್ಲಕ್ಕಿಂತ ಹೆಚ್ಚಾಗಿ, "ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು" ಎಂಬಂತೆ, ಯಾವ ವಿಷಯದಲ್ಲೂ ವಿಚಾರ ಮಾಡದೆ ಮುಂದುವರಿಯಬಾರದು. ಆಗ ಮಾತ್ರ ಈ ಅನುಮಾನ ಪ್ರವೃತ್ತಿ ನಾಶವಾಗಿ, ನಮಗೂ ಇತರರಿಗೂ ಒಟ್ಟಿಗೇ ಒಳ್ಳೆಯದಾಗುತ್ತದೆ. ●

'ಜಾಗೃತಿ'ಯ ಮುಂದಿನ ಸಭೆ ತಾ. ೭-೮-೯೧ರಂದು ಭಾನುವಾರ ಬೆಳಗ್ಗೆ ೧೧ ಗಂಟೆಗೆ ಕಲ್ಕೆರೆ ಮಹಿಳಾ ಸಮಾಜದಲ್ಲಿ ನಡೆಯುತ್ತದೆ.

ಪದ್ಯದಂಗಣ

ಬೇಡಿಕೆ

ಕಾಡದಿರಿ ಕನಸುಗಳೆ
ಭಾವಗಳು ಸತ್ತು
ಗೋರಿಯಾದ
ಎದೆಯ ಒಳಗೆ

ಹಾಡದಿರಿ ಕೋಗಿಲೆಗಳೆ
ಹಸಿರೊಣಗಿ ಉದುರಿದ
ಬೋಳು ಮರದ ಮೇಲೆ

ಹನಿಸದಿರಿ ಮೋಡಗಳೆ
ಬೆಂದು ಬೆಂಗಾಡಾದ
ಬಂಜೆ ಭೂಮಿಯ
ಒಡಲಿಗೆ

ನೀವು ಕಾಡಿದರೆ
ಮನಸು ತಣಿದೀತೆ?
ನೀವು ಹಾಡಿದರೆ
ಹಸಿರು ಚಿಗುರೀತೆ?
ನೀವು ಹನಿಸಿದರೆ
ಮಡಿಲು ತುಂಬೀತೆ?
ಹದ್ದುಗಣ್ಣಿನ ಜನತೆ
ಹೊಸಕಿ ಹಾಕಲು
ಕಾದಿರುವಾಗ ವ್ಯರ್ಥ
ಶ್ರಮವೇಕೆ ನನಗೆ,
ನಿಮಗೆ ....

— ಲಲಿತಾ ಭಾಸ್ಕರ್.

ಪರೋಪಕಾರಿ

ಎಂದಿನಂತೆ ಪಿಂಕ ಬಸ್ಸಿನಲ್ಲಿ ಆಫೀಸಿಗೆ ಹೊರಟಿದ್ದ. ಒಂದು ಸ್ಟಾಪಿನಲ್ಲಿ ಒಳ್ಳೇ ಚೂಡಿ ಚಳ್ಳಿನ ಚೆಲುವೆ ಲೇಡಿ, ಬಸ್ ಹತ್ತಿ ಖಾಲೀ ಸೀಟಿಗಾಗಿ ತನ್ನ ನೀಳವಾದ ಕತ್ತು ಅತ್ತಿತ್ತ ತಿರುಗಿಸುತ್ತಾ ಪಿಂಕ ಕುಳಿತ ಸೀಟಿನ ಹತ್ತಿರ ಬಂದಳು. ಪಿಂಕ ತುಟಿ ಸವರುತ್ತಾ ಅವಳನ್ನೇ ನೋಡುತ್ತಿದ್ದ.

ಹತ್ತಿರ ಬಂದವಳೇ, "ಪ್ಲೀಸ್ ಒಂದು ಸೀಟ್ ಕೊಡ್ತೀರಾ?" ಎಂದು ಪಿಂಕನನ್ನೇ ಕೇಳಿದಳು. ಅತೀ ಹರುಷದಿಂದ ಪಿಂಕ ತನ್ನ ಪಕ್ಕದಲ್ಲಿ ಕುಳಿತ ಬಾಲಕನ ಹತ್ತಿರ "ನೋಡು ಮರಿ, ಬೇರೆಯವರಿಗೆ ಯಾವತ್ತೂ ಸಹಾಯ ಮಾಡಬೇಕು. ನೋಡು ! ಅವರಿಗೆ ಸೀಟು ಕೊಡ್ತೀಯಾ ?" ಎಂದ ಪಾಪ ! ಮುಗ್ಧ ಬಾಲಕ ಎದ್ದೇ ಬಿಟ್ಟ.

ಪಿಂಕ ನಗುನಗುತ್ತಾ "ಮೇಡಂ" ಎಂದು ತನ್ನ ಪಕ್ಕದ ಸೀಟು ತೋರಿಸಿದ. ಕೂಡಲೇ ಚೆಲುವೆ ಆ ಜಾಗಕ್ಕೆ ಅರೆ ತ್ರಾಣಿಯಾದ ತನ್ನ ಅಜ್ಜಿಯನ್ನು ಕರೆ ತಂದು ಕೂರಿಸಿದಾಗ ಪಿಂಕ ಇಂಗು ತಿಂದ ಮಂಗನಂತಾಗಿ ಕಿಟಕಿ ಕಡೆ ಮುಖ ಮಾಡಿ ಪ್ರಕೃತಿ ಸೌಂದರ್ಯದಲ್ಲಿ ಲೀನನಾದ

ಸಂಗ್ರಹ : ಗಣೇಶಮೂರ್ತಿ, ಹುಲುಗಾರು

ಅಪಮೌಲ್ಯದ ಪರಿಣಾಮ—ತುತ್ತು ತುತ್ತಿಗೂ ಹೋರಾಟ !

ಇತ್ತೀಚೆಗೆ ಕೇಂದ್ರ ಹಣಕಾಸು ಮಂತ್ರಿಗಳು ಎರಡು ಕಂತುಗಳಲ್ಲಿ ರೂಪಾಯಿಯ ಬೆಲೆಯನ್ನು ಅಪ ಮೌಲ್ಯಗೊಳಿಸಿದರು. ಇದರಿಂದ ಆಮದು ಕಡಿಮೆಯಾಗಿ ರಫ್ತು ಹೆಚ್ಚುತ್ತದೆಂಬುದು ಅವರ ಲೆಕ್ಕಾಚಾರ.

'ಅಪಮೌಲ್ಯ' ಎಂಬುದರ ಅರ್ಥ ವಸ್ತುಸ್ಥಿತಿಯನ್ನು ಒಪ್ಪಿಕೊಳ್ಳುವುದೇ ಆಗಿದೆ. ಅಪಮೌಲ್ಯಕ್ಕೆ ಇನ್ನೊಂದು ಕಾರಣ : ಪ್ರಸ್ತುತ ನಮ್ಮ ದೇಶದಲ್ಲಿ ಆಮದಿನ ಪ್ರಮಾಣ ರಫ್ತಿನ ಪ್ರಮಾಣದ ಎರಡರಷ್ಟಾಗಿದೆ. ಆದ್ದರಿಂದ ಅದರ ಸಮತೋಲನ ಕಾಪಾಡಿಕೊಳ್ಳಲು, "ರೂಪಾಯಿ ಬೆಲೆಯನ್ನು ಅಪಮೌಲ್ಯಗೊಳಿಸಿ. ಆಗ ದೇಶದ ಉತ್ಪನ್ನಗಳು ಅಗ್ಗದ ಬೆಲೆಗೆ ಸಿಗುವುದರಿಂದ ವಿದೇಶಗಳಲ್ಲಿ ಅದರ ಬೇಡಿಕೆ ಹೆಚ್ಚಾಗಿ, ನಿಮ್ಮ ರಫ್ತಿನ ಪ್ರಮಾಣ ಹೆಚ್ಚುತ್ತದೆ" ಎಂಬುದಾಗಿ ಅಂತರರಾಷ್ಟ್ರೀಯ ಹಣಕಾಸು ನಿಧಿ (ಐ.ಎಂ.ಎಫ್.) ಹೇಳಿದ್ದರಿಂದ ಈ ಕ್ರಮವನ್ನು ಕೈಗೊಳ್ಳಲಾಗಿದೆ. ಇದು ದೇಶದ ಆರ್ಥಿಕ ವ್ಯವಸ್ಥೆಯ ಪುನಶ್ಚೇತನದ ಕ್ರಮವೆಂದು ಸಾರಲಾಗಿದೆ. ಆದರೆ ಇದು ನಿಜವಾಗಿಯೂ ನಮ್ಮ ದೇಶದ ಸಾಮಾನ್ಯ ಜನರ ಪುನಶ್ಚೇತನಕ್ಕೆ ಎಷ್ಟರ ಮಟ್ಟಿಗೆ ಪರಿಣಾಮ ಬೀರಲಿದೆ ಎಂಬುದನ್ನು ನೋಡಬೇಕು.

ರೂಪಾಯಿಯ ಬೆಲೆಯನ್ನು ಅಪಮೌಲ್ಯಗೊಳಿಸಿದುದರ ಪರಿಣಾಮವಾಗಿ, ಜೀವನಕ್ಕೆ ಅಗತ್ಯವಾದ ವಸ್ತುಗಳ ಬೆಲೆಗಳು ತೀವ್ರಗತಿಯಲ್ಲಿ ಏರಲಿವೆ. (ಚಿನ್ನ-ಬೆಳ್ಳಿಯ ಕಥೆಯಂತೂ ಬಿಡಿ. ಅವುಗಳು ಸಾಮಾನ್ಯ ಜನರಿಗೆ ಕೈಗೆಟುಕದ ಗಗನ ಕುಸುಮವಾಯಿತು) ಇದಲ್ಲದೇ ಪ್ರತಿ ವರ್ಷದ ಮಾಮೂಲಿ 'ಕೊರತೆ ಬಜೆಟ್'ನ ಕೊರತೆಯನ್ನು ಸರಿದೂಗಿಸಲು ತೆರಿಗೆಗಳ ಹೇರಿಕೆ. ಹೀಗೆ ಪ್ರತಿಯೊಂದರ ಬೆಲೆಯನ್ನು ಗಗನಕ್ಕೇರಿಸಿದರೆ ಸಾಮಾನ್ಯರ ಜೀವನ, ಅದರಲ್ಲೂ ಗ್ರಾಮೀಣ ಜನರ ಜೀವನದ ಗತಿಯೇನು ? ಒಂದು ತುತ್ತಿನ ಅನ್ನಕ್ಕೆ ಕಷ್ಟವಾಗಿರುವಾಗ, ಇನ್ನು ಮಕ್ಕಳ ವಿದ್ಯಾಭ್ಯಾಸ, ಮದುವೆ ಮುಂತಾದುವುಗಳಿಗೆ ಹಣವನ್ನು ಒದಗಿಸಲು ಸಾಧ್ಯವೇ ?

ಕಾಂಗ್ರೆಸ್ ಪಕ್ಷವು ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ 'ಅಗತ್ಯವಸ್ತುಗಳ ಬೆಲೆಯನ್ನು ನೂರೇ ದಿನಗಳಲ್ಲಿ ಇಳಿಸಲಾಗುವುದು' ಎಂದು ಹೇಳಿತ್ತು. ಜನರ ಜೀವನದಲ್ಲಿ ಹಣವು ಅತ್ಯಂತ 'ಅಗತ್ಯವಸ್ತು'ವಾದ್ದರಿಂದ ಅದರ ಬೆಲೆಯನ್ನು ಇಳಿಸಿತೇ?

ನಿಜ, ಇಂದು ನಮ್ಮ ದೇಶ ತೀವ್ರ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿದೆ. ವಿದೇಶಗಳಲ್ಲಿ ಚಿನ್ನವನ್ನೂ ಒತ್ತೆಯಿಡುವಷ್ಟರ ಮಟ್ಟಿಗೆ ಬಿಕ್ಕಟ್ಟು ಉಂಟಾಗಿದೆ. ಇದೇ ರೀತಿ ಮುಂದುವರಿದರೆ, ಮುಂದೊಂದು ದಿನ ದೇಶವನ್ನೂ ಒತ್ತೆಯಿಡಬೇಕಾದೀತು!

ಅಪಮೌಲ್ಯದಿಂದಾಗಿ, ಅನೇಕ ಕಾರ್ಖಾನೆಗಳು ಆಮದು ಮಾಡಿಕೊಳ್ಳುವ ಕಚ್ಚಾ ವಸ್ತುಗಳ ಬೆಲೆಗಳೂ ಹೆಚ್ಚುವುದರಿಂದ

(೩ನೇ ಪುಟಕ್ಕೆ)

ತೆಂಗಿನಮನೆ ಕ್ರೀಡಾಂಗಣ : ಇಡೀ ವಿದ್ಯಮಾನದ ತನಿಖೆಗೆ ಆಗ್ರಹ

ಓದುಗರ ಪತ್ರಗಳು

ಪ್ರಿಯರೆ,

ತೆಂಗಿನಮನೆ ಕ್ರೀಡಾಂಗಣದ ನಕಾಶೆಯನ್ನು ಕೊಪ್ಪದ ತಹಸೀಲ್ದಾರ್ ಆಗಿದ್ದ ಜಿ. ಎಸ್. ನಾಯಕ್ ಅವರ ಬಾಯಿ ಮಾತಿನ ಆದೇಶದಂತೆಯೇ ಅವರು ಸೂಚಿಸಿದ ರೀತಿಯಲ್ಲಿಯೇ ಬದಲಿಸಿದ್ದಾಗಿ ಆಗಿನ ಸರ್ವೆಯರ್ ರಂಗೇಗೌಡ ಅವರು ತನಿಖೆಯ ವೇಳೆ ಲಿಖಿತ ಹೇಳಿಕೆ ನೀಡಿರುವುದಾಗಿ ವರದಿಯಾಗಿದೆ ಇದನ್ನೇ ಪುಷ್ಟೀಕರಿಸುವ ಹೇಳಿಕೆಗಳನ್ನು ಸಂಬಂಧಪಟ್ಟ ಗುಮಾಸ್ತ ಮತ್ತು ರೆವಿನ್ಯೂ ಇನ್ಸ್‌ಪೆಕ್ಟರ್ ಅವರುಗಳೂ ನೀಡಿದ್ದಾರೆನ್ನಲಾಗಿದೆ.

ಜಿಲ್ಲಾಧಿಕಾರಿಗಳನ್ನು ಕೊಪ್ಪದಲ್ಲಿ ಭೇಟಿ ಮಾಡಿದ್ದ ಕೊಪ್ಪ ಮತ್ತು ಸುತ್ತಮುತ್ತಲಿನ ವಿವಿಧ ಕ್ರೀಡಾ ತಂಡಗಳ ಪ್ರತಿನಿಧಿಗಳು ನಕಾಶೆ ಬದಲಾವಣೆ ಬಗ್ಗೆ ತನಿಖೆಗೆ ಒತ್ತಾಯಿಸಿದ ಮೇರೆಗೆ ಜಿಲ್ಲಾಧಿಕಾರಿಗಳು ತಹಸೀಲ್ದಾರ್‌ರವರಿಗೆ ತನಿಖೆಗೆ ಆದೇಶಿಸಿ ಈಗಾಗಲೇ ಹಲವಾರು ತಿಂಗಳು ಕಳೆದಿವೆ. ತಹಸೀಲ್ದಾರರೇಕೆ ಇನ್ನೂ ತನಿಖೆಯ ವಿವರಗಳನ್ನು ಬಹಿರಂಗಪಡಿಸಿ, ತಪ್ಪಿತಸ್ಥರ ಮೇಲೆ ಕ್ರಮ ಜರುಗಿಸಿಲ್ಲ ಅಥವಾ ಅದಕ್ಕೆ ಶಿಫಾರ್ಸು ಮಾಡಿಲ್ಲ?

ಒಟ್ಟಿನಲ್ಲಿ, ಕ್ರೀಡಾಂಗಣದ ನಕಾಶೆ ಬದಲಾದ ಪ್ರಕರಣವನ್ನಷ್ಟೇ ಅಲ್ಲದೆ, ವಿಧ್ವಂಸಕ ಕೃತ್ಯಗಳು ನಡೆದಂದಿನಿಂದ ಇಲ್ಲಿಯವರೆಗೆ ಈ ಕ್ರೀಡಾಂಗಣಕ್ಕೆ ಸಂಬಂಧಿಸಿದ ಎಲ್ಲಾ ವಿದ್ಯಮಾನಗಳ ಬಗ್ಗೆಯೂ ವಿಚಾರಣೆ ನಡೆಸಬೇಕೆಂದು ಸ್ಥಳೀಯ ನಾಗರೀಕರು ಜಿಲ್ಲಾಧಿಕಾರಿಗಳನ್ನು ಒತ್ತಾಯಿಸುತ್ತಿದ್ದಾರೆ

—ಟಿ. ಕೆ. ಪ್ರಭಾಕರ್,
ತೆಂಗಿನಮನೆ.

ಆಯುರ್ವೇದಕ್ಕೆ ಕಾಯಕಲ್ಪದ ಭರವಸೆ ನೀಡಿರುವ ತಾರಾದೇವಿಗೆ ಅಭಿನಂದನೆ

ಪ್ರಿಯರೆ,

ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದಿಂದ ಗೆದ್ದ ಶ್ರೀಮತಿ ತಾರಾದೇವಿಯವರು ಕೇಂದ್ರದ ಆರೋಗ್ಯ ಖಾತೆ ರಾಜ್ಯ ಸಚಿವೆಯಾಗಿ ಪ್ರಮಾಣ ವಚನ ಸ್ವೀಕರಿಸುತ್ತಿದ್ದಂತೆ ತಮ್ಮ ಒಲವನ್ನು ಆಯುರ್ವೇದ ಕ್ಷೇತ್ರದತ್ತ ತೋರಿಸಿ ಅದರ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುವುದಾಗಿ ಸ್ವಯಂ ಸ್ಫೂರ್ತಿಯ ಹೇಳಿಕೆ ನೀಡಿರುವುದು ತುಂಬಾ ಶ್ಲಾಘನೀಯ.

ಸಾವಿರಾರು ವರ್ಷಗಳ ಇತಿಹಾಸವುಳ್ಳ ಈ ಭಾರತೀಯ ವೈದ್ಯ ಪದ್ಧತಿ ಒಂದು ಕಾಲದಲ್ಲಿ ಇಡೀ ವಿಶ್ವದ ಅನೇಕ ವೈದ್ಯಕೀಯ ಪದ್ಧತಿಗಳಿಗೆ ತಾಯಿ ಬೇರಿನಂತಿತ್ತು. ಆದರೆ, ತನ್ನ ದೇಶದಲ್ಲಿಯೇ ಇದಕ್ಕೆ ಸರಿಯಾದ ಪ್ರೋತ್ಸಾಹವಿಲ್ಲದೆ ನಶಿಸುತ್ತಾ ಹೋಯಿತು ಸ್ವಾತಂತ್ರ್ಯನಂತರವಾದರೂ ಇದು ಮತ್ತೆ ಪುನರುತ್ಥಾನಗೊಳ್ಳಬಹುದೆಂದು ತಿಳಿದ ನಮಗೆ ಭ್ರಮ ನಿರಸನವೇ ಆಯಿತು. ಕೇಂದ್ರದಲ್ಲಿ ಇಲ್ಲಿಯವರೆಗೆ ಅನೇಕ ಸರ್ಕಾರಗಳು ಬಂದು ಹೋದರೂ ಯಾವ ಆರೋಗ್ಯ ಸಚಿವರೂ ಚಕಾರವೆತ್ತದೆ ಇರುವಾಗ, ಸಚಿವೆ ಸ್ಥಾನವನ್ನು ಅಲಂಕರಿಸುತ್ತಿದ್ದಂತೆಯೇ ಆಯುರ್ವೇದಕ್ಕೆ ಹಿಡಿದ ಗ್ರಹಣವನ್ನು ಕಾಯಕಲ್ಪ ಚಿಕಿತ್ಸೆ ಮೂಲಕ ಬಿಡಿಸುವ ತಮ್ಮ ಇಂಗಿತವನ್ನು ವ್ಯಕ್ತಪಡಿಸಿರುವುದು ಆಯುರ್ವೇದ ಇತಿಹಾಸದಲ್ಲಿ ಒಂದು ಹೊಸ ಮೈಲಿಗಲ್ಲು.

ಈ ದಿಸೆಯಲ್ಲಿ ದೇಶೀಯ ವೈದ್ಯ ಪದ್ಧತಿ ಇಲಾಖೆ, ಆಯುರ್ವೇದ ವೈದ್ಯರು, ಆಯುರ್ವೇದದ ಅಭಿಮಾನಿಗಳು, ಅಷ್ಟೇಕೆ ಪ್ರತಿ ಒಬ್ಬ ಭಾರತೀಯನೂ ಶ್ರೀಮತಿ ತಾರಾದೇವಿಯವರನ್ನು ಅಭಿನಂದಿಸಬೇಕು

—ಡಾ॥ ಎಚ್. ಜಿ. ಶೇಷಗಿರಿ,
ಹರಿಹರಪುರ.

ವರ್ಗವಾದ ಕೊಪ್ಪ ತಹಸೀಲ್ದಾರರ ನಿಜ ಬಣ್ಣ?

ಪ್ರಿಯರೆ,

ಕೊಪ್ಪ ತಾಲ್ಲೂಕು ತಹಸೀಲ್ದಾರರಾಗಿದ್ದ ಗಿರಿಜಾ ಶಂಕರ ನಾಯಕ್ ಇವರ ಕುರಿತು ಅನೇಕ ಊಹಾಪೋಹಗಳು ಈವರೆಗೂ ಸಾರ್ವಜನಿಕರಲ್ಲಿ ಪ್ರಚಲಿತವಾಗಿದ್ದವು. ಈಗ ಅವರ ವರ್ಗಾವಣೆಯಾದ ಕೂಡಲೇ ಅವರ ಕುರಿತು ಅನೇಕ ವಿಷಯಗಳು ಬೆಳಕಿಗೆ ಬಂದಿವೆ.

೧. ತಹಸೀಲ್ದಾರರ ಜೊತೆಗೆ ಅವರ ಕಛೇರಿಯ ಸಿಬ್ಬಂದಿಗಳೆಲ್ಲ ಸೇರಿ ಹಣ ಹಾಕಿ ತರಿಸಿದ್ದ ಅವರ ಛೇಂಬರಿನ ಖುರ್ಚಿಗಳನ್ನು ಕೂಡಾ ಅವರು ವರ್ಗವಾಗಿ ಹೋಗುವಾಗ ಬಿಚ್ಚಿಕೊಂಡು ಹೋಗಿದ್ದು, ಇದುವರೆಗೆ ಬಂದ ಯಾವ ಅಧಿಕಾರಿಯೂ ಇಷ್ಟರ ತನಕದ ಸಣ್ಣತನವನ್ನು ತೋರಿಸಿಲ್ಲ ಎಂದು ಜನರು ಆಡಿಕೊಳ್ಳುತ್ತಿದ್ದಾರೆ.

೨. ಮೈಸೂರು ಪ್ಲಾಂಟೇಶನ್ ಕುರಿತಾದ ಟಿ ಟಿ ಸಹವಳಿಕೆಗಳಲ್ಲಿ ಸದ್ರಿ ತಹಸೀಲ್ದಾರರು ಭ್ರಷ್ಟಾಚಾರದ ಪರಮಾವಧಿಗೆ ಮುಟ್ಟಿದ್ದರು ಮೊದಲೇ ಮುಂಗಡ (ಲಂಚದ) ಹಣವನ್ನು ಪಡೆದುಕೊಂಡಿದ್ದು. ಈಗ ವರ್ಗಾವಣೆಯಾದ ಬಳಿಕ, ತಾನು ಒಪ್ಪಿಕೊಂಡ ಕೆಲಸವನ್ನು ಮಾಡಲೂ ಆಗದೇ ತನ್ನ ಕೆಳ ಅಧಿಕಾರಿಗಳಿಗೆ ಈ ಕುರಿತು ಸರಿಯಾದ ಆದೇಶವನ್ನು ನೀಡಲೂ ಆಗದೇ ಸಂದಿಗ್ಧ ಪರಿಸ್ಥಿತಿ ಉಂಟಾಗಿರುವುದಾಗಿ ಹೇಳಲಾಗುತ್ತಿದೆ. ಇದೇ ರೀತಿ ಘಂಟೇಖಾನ್ ಎಸ್ಟೇಟಿನ ಟಿ. ಟಿ ವಿಚಾರದಲ್ಲಿ ಕೂಡ ಬೃಹತ್ ಪ್ರಮಾಣದಲ್ಲಿ ಭ್ರಷ್ಟಾಚಾರ ನಡೆಸಿರುವರೆನ್ನಲಾಗಿದ್ದು, ಇವುಗಳ ಕುರಿತು ಈಗಾಗಲೇ ಇವರ ವಿರುದ್ಧ ಲೋಕಾಯುಕ್ತಕ್ಕೆ ತನಿಖೆಗಾಗಿ ದೂರು ಹೋಗಿದೆ.

ತೆಂಗಿನಮನೆ ಕ್ರೀಡಾಂಗಣ ನಕಾಶೆ ಬದಲಾವಣೆ, ಶಂಕರ್ ಕಾರ್ಮಿಕ ನಾಯಕರನ್ನು 'ಗೂಂಡಾ ಕಾಯಿದೆ' ಅಡಿ ಬಂಧಿಸಿರುವ ಏಕಪಕ್ಷೀಯ ಕ್ರಮ, ಕೈಕೆಳಗಿನ ಅಧಿಕಾರಿಯೊಬ್ಬರಿಗೆ ಅವಾಚ್ಯವಾಗಿ ನಿಂದಿಸಿದ ವಿಚಾರ [illegible] ಚಿಕ್ಕಮಗಳೂರಿನಲ್ಲಿ ಕೇಳಿಬಂದ — ಇವೇ ಮುಂತಾದ ಹಗರಣಗಳು ಇವರ ಹೆಸರಿಗಿವೆ.

ಇವರನ್ನು ವರ್ಗಾವಣೆ ಮಾಡಿಸಿ ಜಿಲ್ಲಾಧಿಕಾರಿಯವರಿಗೆ ಕೊಪ್ಪದ ಜನತೆ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ಇವರು ಹೋದಲ್ಲೆಲ್ಲಾದರೂ ಇಂತಹುದೇ ಕೆಟ್ಟ ಕೆಲಸ ಮಾಡದಿರಲಿ ಎಂದು ನಮ್ಮಗಳ ಅಪೇಕ್ಷೆ. ಏಕೆಂದರೆ "ಕಲ್ಪನ ತೆಂಗಿನ ಎಂದಿದ್ದರೂ ಮುಂಡೆ" ಎಂಬ ಗಾದೆಯು ಮಾತೇ ಇಂದಿದೆ.

ಹಾಗೆಯೇ, ಬರಲಿರುವ ತಹಸೀಲ್ದಾರರಾದರೂ ಸ್ವಲ್ಪ ಜನೋಪಕಾರಿಯಾಗಿದ್ದಾರೆ—ಎಂದು ಕಾಯುತ್ತಿದ್ದೇವೆ

—ನಾಗರಿಕರು, ಕೊಪ್ಪ.
(೯ ಜನರ ಸಹಿಗಳಿವೆ)

(ಈ ಎಲ್ಲ 'ವ್ಯವಹಾರ'ಗಳ ಕುರಿತು ಈ ಮೊದಲೇ ಸಾರ್ವಜನಿಕವಾಗಿ [illegible] ಗಳಾಗಿದ್ದರೂ, ಮೇಲಧಿಕಾರಿಗಳಾಗಲೀ ದೂರು ಸಲ್ಲಿಸಿ ಬಹಿರಂಗಗೊಳಿಸದಿದ್ದುದು ಒಂದು ಬೇಸರದ ಸಂಗತಿ. ಇನ್ನಾದರೂ ಇಂತಹವರ ಬಗ್ಗೆ ಇರುವಾಗಲೇ ಪ್ರಕಟವಾಗಬೇಕಿತ್ತು, ಅಲ್ಲವೆ ? —ಸಂ.)

ಅಪಮೌಲ್ಯದ ಪರಿಣಾಮ

(೨ನೇ ಪುಟದಿಂದ)

'ಲೇ-ಆಫ್' (ತಾತ್ಕಾಲಿಕ ಬಂದ್) ಮಾಡುವ ಯೋಜನೆಯಲ್ಲಿವೆ ಹೀಗಾದರೆ ನೌಕರರ, ಅವರ ಸಂಸಾರಗಳ ಗತಿಯೇನು? ಈ ರೀತಿಯ ಅಪಮೌಲ್ಯಗೊಳಿಸುವ ಬದಲು ತೆರಿಗೆಗಳ್ಳರು, ಲಾಭಕೋರರು, ಕಪ್ಪು ಹಣ ಸಂಗ್ರಹಕಾರರನ್ನೂ ಹದ್ದುಬಸ್ತಿಗೆ ತಂದಿದ್ದರೆ, ನಮ್ಮ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತಿರಲಿಲ್ಲವೆ? ಕಳೆದ ಒಂದೇ ವರ್ಷದಲ್ಲಿ ೫೮,೦೦೦ ಕೋಟಿ ರೂ ಗಳಷ್ಟು ಕಪ್ಪು ಹಣವಾಗಿ ಮಾರ್ಪಟ್ಟಿದೆ ಎಂದು ದೇಶದ ವಿಖ್ಯಾತ [illegible] ತಜ್ಞರೊಬ್ಬರು ಹೇಳಿದ್ದು ಮೊನ್ನೆ [illegible] ವರದಿಯಾಗಿದೆ ಅದನ್ನು [illegible] ಬಿಟ್ಟು ಪರಿಹಾರವೇನು? [illegible] ಹಾಕುವ ಅಗತ್ಯ ಇಲ್ಲವಷ್ಟೆ?

ಹೀಗೇ ನಡೆದರೆ ಮುಂದೆ ಜನ [illegible] ನ್ಯದ ಪ್ರತಿಯೊಂದು [illegible] ಹೋರಾಡಬೇಕಾದೀತು !

● ಅರೀಹಳ್ಳಿ ಸುರೇಶ

ಏತ ನೀರಾವರಿ ಕಾಮಗಾರಿ ಅಪೂರ್ಣ : ಕೆಡಿಪಿ ಸಭೆಯಲ್ಲಿ ಶಾಸಕರ ತರಾಟೆ

ಚಿಕ್ಕಮಗಳೂರು : ಶೃಂಗೇರಿ ಕ್ಷೇತ್ರದಲ್ಲಿ ಲಕ್ಷಾಂತರ ರೂ. ಗಳ ವೆಚ್ಚದಲ್ಲಿ ಕೈಗೊಂಡ ಕೆಲವು ಏತ ನೀರಾವರಿ ಯೋಜನೆಗಳು ಹಲವು ವರ್ಷಗಳಿಂದ ಅಪೂರ್ಣಗೊಂಡಿದ್ದರೂ ಅಧಿಕಾರಿಗಳು ಆ ಬಗ್ಗೆ ಕಾಳಜಿ ವಹಿಸಿಲ್ಲ ಎಂದು ಈಚಿನ ಜಿಲ್ಲಾ ಕೆಡಿಪಿ ಸಭೆಯಲ್ಲಿ ಶಾಸಕ ಶಾಮಣ್ಣ ಆಕ್ರೋಶ ವ್ಯಕ್ತಪಡಿಸಿದರು.

ಕೂಸಗಲ್ಲು, ಹೆಡ್ಸೆ, ಬೊಮ್ಲಾಪುರ, ಬಂಡಿಗಡಿ, ಕುಸಬೂರುಗಳಲ್ಲಿ ಏತ ನೀರಾವರಿ ಯೋಜನೆಗಳನ್ನು ಕೈಗೊಂಡು ಎಂಟು ವರ್ಷಗಳಾಗುತ್ತಾ ಬಂದರೂ ಪೂರ್ಣಗೊಂಡಿಲ್ಲ. ಗಂಗಾ ಕಲ್ಯಾಣ ಯೋಜನೆ ಅಡಿ ಕೈಗೊಂಡಿರುವ ಈ ಕೆಲಸ ಕೃತಿಗಳ ಯದಿರಲು ಅಧಿಕಾರಿಗಳ ಹೊಣೆಗೇಡಿತನವೇ ಕಾರಣ ಎಂದು ಟೀಕಿಸಿದ ಅವರು, ಈ ಬಗ್ಗೆ ಈಗಲೇ ಸಮಂಜಸ ಉತ್ತರ ನೀಡಬೇಕೆಂದು ಪಟ್ಟುಹಿಡಿದರು.

ಕುಸಬೂರಿನ ಯೋಜನೆ ಪೂರ್ಣಗೊಳ್ಳುವ ಹಂತದಲ್ಲಿದೆ ಎಂದು ಅಧಿಕಾರಿಗಳು ಉತ್ತರಿಸಿದಾಗ "ಸುಳ್ಳು ಮಾಹಿತಿ ನೀಡುವ ಅಗತ್ಯವಿಲ್ಲ"ವೆಂದು ಶಾಮಣ್ಣ ಖಟುವಾಗಿ ಹೇಳಿದರು. ಈ ಬಗ್ಗೆ ಗಂಭೀರವಾಗಿ ಯೋಚಿಸುವಂತೆ ಸರ್ಕಾರದ ಪ್ರತಿನಿಧಿ ನಗೀರ್ ಅಹಮದ್ ಅವರುಗಳೂ ಆಗ್ರಹಿಸಿದರು. ಆಗಸ್ಟ್ ೧೫ರ ಒಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸುವ ಭರವಸೆ ದೊರಕಿತು.

ರೂಪಾಯಿ ಅಪಮೌಲ್ಯ ಕುರಿತು ಕೊಪ್ಪದ ಪದವಿ ಕಾಲೇಜಿನಲ್ಲಿ ವಿಚಾರ ಸಂಕಿರಣ

ಕೊಪ್ಪದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು [illegible] ಬದುಕು ಬಳಗ ಸಂಯುಕ್ತ ಆಶ್ರಯದಲ್ಲಿ ಆಗಸ್ಟ್ ೮, [illegible] ಗಂಟೆಗೆ ಕಾಲೇಜಿನ ಸಭಾಂಗಣದಲ್ಲಿ [illegible] ಅಪಮೌಲ್ಯ ಮತ್ತು [illegible] ಎಫ್. ಹಸ್ತಕ್ಷೇಪ ಕುರಿತು ವಿಚಾರ ಸಂಕಿರಣ ಏರ್ಪಡಿಸಲಾಗಿದೆ.

ಶಿವಮೊಗ್ಗ ಡಿ.ವಿ.ಎಸ್. ಪದವಿ ಕಾಲೇಜು ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ॥ ಬಿ.ಎಂ. ಕುಮಾರಸ್ವಾಮಿ, [illegible] ವಿಭಾಗದ ಉಪನ್ಯಾಸಕರಾದ [illegible] ಹಾಗೂ ಭದ್ರಾವತಿ [illegible] ಎಂ. [illegible] ರಮ್ಮ ಕಾಲೇಜು ಉಪನ್ಯಾಸಕರಾದ [illegible] ಎಚ್. [illegible] ಮಾತನಾಡುತ್ತಾರೆ. [illegible] ವಹಿಸುತ್ತಾರೆ.

[illegible] ಭಾಗವಹಿಸಿ, [illegible] ಪಡೆದುಕೊಳ್ಳಲು ಕೋರಲಾಗಿದೆ.

ಕೊಪ್ಪದಲ್ಲಿ ಸ್ವಯಂ ಚಾಲಿತ ದೂರವಾಣಿ ಕೇಂದ್ರ ಆರಂಭ

ಕೊಪ್ಪ : ಇಲ್ಲಿನ ಹಳೆಯ ದೂರವಾಣಿ ವ್ಯವಸ್ಥೆ ("ನಂಬರ್ ಪ್ಲೀಸ್" ಪದ್ಧತಿ) ಯ ಬದಲು ಸ್ವಯಂಚಾಲಿತ ಎಲೆಕ್ಟ್ರಾನಿಕ್ ದೂರವಾಣಿ ಕೇಂದ್ರದ ಉದ್ಘಾಟನೆ ಜು. ೧೦ರಂದು ನಡೆಯಿತು.

ಶಾಸಕ ಶಾಮಣ್ಣ ಅವರು ಸ್ವಯಂಚಾಲಿತ ದೂರವಾಣಿ ಕೇಂದ್ರವನ್ನೂ ಕೊಪ್ಪ ಮಂಡಲ ಪ್ರಧಾನ ಪಿ. ಬಿ. ವಿವೇಕ್, ಅಂಚೆ ಕಛೇರಿಯಲ್ಲಿ ಸ್ಥಾಪಿಸಲಾದ 'ಎಸ್. ಟಿ. ಡಿ.' ಟೆಲಿಫೋನ್ ವ್ಯವಸ್ಥೆಯನ್ನೂ ಉದ್ಘಾಟಿಸಿದರು. ಶಾಮಣ್ಣ ದೆಹಲಿಯಲ್ಲಿದ್ದ ಡಿ. ಕೆ. ತಾರಾದೇವಿಯವರಿಗೆ ಎಸ್.ಟಿ.ಡಿ. ಮೂಲಕ 'ಉದ್ಘಾಟನಾ ಕರೆ' ಮಾಡಿದರು.

ಅನಂತರ ದೂರವಾಣಿ ದಕ್ಷಿಣ ವಲಯದ ಡೆಪ್ಯುಟಿ ಜನರಲ್ ಮ್ಯಾನೇಜರ್ ವಿ. ಗೋವಿಂದರಾಜ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಶಾಮಣ್ಣ, ವಿವೇಕ್, ಎಂ. ಡಿ. ಬಾಲಕೃಷ್ಣ, ದೂರವಾಣಿ ಸಲಹಾ ಮಂಡಳಿ ಸದಸ್ಯ ಎಚ್. ಬಿ ರಾಜಗೋಪಾಲ್ ಹಾಗೂ ಜಿಲ್ಲಾ ಟೆಲಿಕಾಂ ಇಂಜಿನಿಯರ್ ಕೆ. ಸಿ. ರಾವ್ ಮುಖ್ಯ ಅತಿಥಿಗಳಾಗಿದ್ದರು.

ಎಸ್. ಟಿ. ಡಿ. ಸೌಲಭ್ಯ ಕೊಪ್ಪದ ಎಲ್ಲಾ ಬಳಕೆದಾರರಿಗೂ ಶೀಘ್ರವೇ ಸಿಗಲೆಂದು ರಾಜಗೋಪಾಲ್ ಹೇಳಿದರೆ, ಆನೇ ಯೋಜನೆಯಲ್ಲಿ ಎಲ್ಲಾ ತಾ|| ಕೇಂದ್ರಗಳಿಗೂ ಎಸ್‌ಟಿಡಿ ಸೌಲಭ್ಯ ಕಲ್ಪಿಸಬೇಕೆಂದು ಸರ್ಕಾರ ತೀರ್ಮಾನಿಸಿದೆ; ಇನ್ನು ಒಂದೆರಡು ವರ್ಷಗಳಲ್ಲಿ ಈ ಕೆಲಸ ಆಗಬಹುದು ಎಂದು ಕೆ. ಸಿ. ರಾವ್ ಹೇಳಿದರು.

ಸದ್ಯದಲ್ಲೇ ಶಾನುವಳ್ಳಿ, ನೆಮ್ಮಾರು ಮತ್ತು ಮುತ್ತಿನಕೊಪ್ಪದಲ್ಲಿ ದೂರವಾಣಿ ಕೇಂದ್ರಗಳನ್ನು ಸ್ಥಾಪಿಸುವುದಾಗಿಯೂ ಅವರು ಹೇಳಿದರು.

ರೋಟರಿ ಅಧ್ಯಕ್ಷ ಅಬು ಮಹಮದ್ ಸ್ವಾಗತಿಸಿ, ಜೂನಿಯರ್ ಇಂಜಿನಿಯರ್ ಎಚ್.ಕೆ. ನಾಗರಾಜ್ ವಂದಿಸಿದರು.

ಈವರೆಗೆ ಕೊಪ್ಪ ಕೇಂದ್ರದ ಸಾಮರ್ಥ್ಯ ೨೫೦ ಲೈನ್‌ಗಳಿದ್ದುದು ಈಗ ೩೦೦ಕ್ಕೇರಿದೆ ಹಾಗೂ ಸ್ಥಳೀಯ ಕರೆಗಳನ್ನೂ 'ಮೀಟರಿಂಗ್'ಗೆ ಒಳಪಡಿಸಿ, ಶುಲ್ಕ ವಿಧಿಸುವ ಕ್ರಮ ಜಾರಿಗೊಂಡಿದೆ.

ತೊರೆಹಡ್ಲು ಹೆಡ್ಮಾಸ್ಟರಾಗಿ ಚಾಮರಾಜ್

ಕೊಪ್ಪ : ಇಲ್ಲಿ ಸಹಾಯಕ ಶಿಕ್ಷಣಾಧಿಕಾರಿಯಾಗಿದ್ದ ಎ. ಟಿ. ಚಾಮರಾಜ್ ಅವರಿಗೆ ಶೃಂಗೇರಿ ತಾ|| ತೊರೆಹಡ್ಲು ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯರಾಗಿ ವರ್ಗವಾಗಿದೆಯೆಂದು ತಿಳಿದು ಬಂದಿದೆ.

ತಮ್ಮ ವ್ಯಕ್ತಿತ್ವದ ಕಪ್ಪುಚುಕ್ಕೆಗಳು ಎನ್ನಬಹುದಾದ ಕೈ-ಅಶುದ್ಧಿ, ರಾಜಕಾರಣಿಗಳನ್ನು ಓಲೈಸುವುದು ಮತ್ತು ಅಜಾಗರೂಕತೆ-ಅನಗತ್ಯ ಗಡಿಬಿಡಿ ಇವುಗಳನ್ನು ಚಾಮರಾಜ್ ನಿಗ್ರಹಿಸಿಕೊಂಡರೆ, ಇವರಲ್ಲಿರುವ ಕ್ರಿಯಾಶೀಲತೆ ಮತ್ತು ಉತ್ಸಾಹಗಳು ಇನ್ನೂ ಬಾಲಗ್ರಹ ಪೀಡೆಯಿಂದ ಬಿಡುಗಡೆಗೊಳ್ಳಲು ಕಾಯುತ್ತಿರುವ ತೊರೆಹಡ್ಲು ಶಾಲೆಯ ಸ್ವರೂಪವನ್ನೇ ಬದಲಿಸಿ ಅದನ್ನೊಂದು ಮಾದರಿ ಶಾಲೆಯಾಗಿಸಲು ಸಮರ್ಥವಾಗಿವೆ

ಇಲ್ಲಿಗೆ ಬಂದ ಹೊಸತರಲ್ಲಿ ಅಪಾರ ನಿರೀಕ್ಷೆ ಮೂಡಿಸಿದ್ದ ಚಾಮರಾಜ್ ಇನ್ನಾದರೂ ತಿದ್ದಿಕೊಳ್ಳುತ್ತಾರೋ, ಅಥವಾ "ಅದು ಬಿಡಿ; ಹೀನ ಸುಳಿ" ಎನ್ನಿಸಿಕೊಂಡೇ ಇರುತ್ತಾರೋ- ಕಾದು ನೋಡಬೇಕು.

ಕೃಷಿ ತರಬೇತಿ ಶಿಬಿರ

ಜೆಟ್ಟಿಗರೆ: ಇಲ್ಲಿನ ಸಂತೋಷ್ ಯುವಕ ಸಂಘದ ಆಶ್ರಯದಲ್ಲಿ ಈಚೆಗೆ ಕೃಷಿ ತರಬೇತಿ ಶಿಬಿರ ಏರ್ಪಡಿಸಲಾಗಿತ್ತು. ಶೃಂಗೇರಿಯ ಸಹಾಯಕ ಕೃಷಿ ನಿರ್ದೇಶಕ ಎ. ಚಂದ್ರಶೇಖರ್, ಕೃಷಿ ತೋಟಗಾರಿಕಾ ಕಾರ್ಯದರ್ಶಿ ಶಿವಸ್ವಾಮಿ, ಕೃಷಿ ಸಹಾಯಕ ಚಂದ್ರಶೇಖರ್ ಇವರುಗಳು ಭತ್ತದ ಬೆಳೆ, [illegible] ರಾಜಿನಗಳು, ಹತೋಟಿ [illegible] ರಾಸಾಯನಿಕ ಗೊಬ್ಬರ [illegible] ಕುರಿತು ವಿವರಣೆ ನೀಡಿದರು. ಅಡಿಕೆ ಬೆಳೆ [illegible] ತ್ತು ಅದರ ಕೀಟ ಬಾಧೆಗಳ ಕುರಿತು ಶಿವಸ್ವಾಮಿ ಮಾತನಾಡಿದರು

ಕಾರ್ಯದರ್ಶಿ ಎಸ್. ಸಿ. ಭಾಸ್ಕರ್ ಸ್ವಾಗತಿಸಿ ಕೆ ಎಸ್. ವೆಂಕಪ್ಪ ವಂದಿಸಿದರು

ಆಕಾಶವಾಣಿಯಲ್ಲಿ ಕೊಪ್ಪ ಶಾಲಾ ಮಕ್ಕಳ ಕಾರ್ಯಕ್ರಮ

ಕೊಪ್ಪ : ಇಲ್ಲಿನ ಶಾರದಾ ವಿದ್ಯಾಮಂದಿರದ ಮಕ್ಕಳ ಕಾರ್ಯಕ್ರಮಗಳು ಭದ್ರಾವತಿ ಆಕಾಶವಾಣಿಯಲ್ಲಿ ಜು. ೨೮ರ ಭಾನುವಾರ ಬೆಳಗ್ಗೆ ೯-೧೫ಕ್ಕೆ 'ಚಿಣ್ಣರ ಬಳಗ'ದಲ್ಲಿ ಪ್ರಸಾರವಾಗಲಿವೆ.

ಜಿಲ್ಲೆಗೆ ಆಕಾಶವಾಣಿ ಕೇಂದ್ರ

ಚಿಕ್ಕಮಗಳೂರು : ಜಿಲ್ಲೆಗೆ ಎಫ್.ಎಂ. ಆಕಾಶವಾಣಿ ಕೇಂದ್ರ ಮಂಜೂರಾಗಿದೆ.

ಶಾಸಕ ಸಿ. ಆರ್. ಸಗೀರ್ ಅಹಮದ್ ಅವರು, ಈ ವಿಷಯ ತಿಳಿಸಿ ಇದಕ್ಕಾಗಿ ನಾಲ್ಕು ಎಕರೆ ಸ್ಥಳ ಕೇಳಿದ್ದು, ಹಾಸನ ಆಕಾಶವಾಣಿ ಕೇಂದ್ರದವರು ಜು. ೧೯ ರಂದು ಬಂದು ಸ್ಥಳ ಪರಿಶೀಲಿಸಿದರೆಂದಿದ್ದಾರೆ.

ಇಂಗ್ಲಿಷ್ ಹೆಸರಿನ (ಕನ್ನಡ) ಯುವಕ ಸಂಘ

ಅಸಗೋಡು : ಇಲ್ಲಿ ಈಚೆಗೆ 'ಚೇತನ ಯೂತ್ ಕ್ಲಬ್' ಎಂಬ ನೂತನ ಯುವಕ ಸಂಘವನ್ನು ಸಾಮಾಜಿಕ ಅರಣ್ಯ ವಿಭಾಗಾಧಿಕಾರಿ ಶಿವಪ್ರಕಾಶ್ ಉದ್ಘಾಟಿಸಿ, ಪರಿಸರ ಸಂರಕ್ಷಣೆಯಲ್ಲಿ ಯುವ ಜನರು ಹೆಚ್ಚು ಆಸಕ್ತಿ ವಹಿಸಿ ಸಕ್ರಿಯವಾಗಿ ಭಾಗವಹಿಸಬೇಕೆಂದು ಕರೆ ನೀಡಿದರು. ಬಿ. ಜಿ. ಚಿದಂಬರ್, ಎ ಬಿ. ವಾಸಪ್ಪ, ವಿ. ಡಿ. ನಾಗರಾಜ್ ಮುಖ್ಯ ಅತಿಥಿಗಳಾಗಿದ್ದರು. ಅಧ್ಯಕ್ಷತೆ ವಹಿಸಿದ್ದ ಹರಿಹರಪುರ ಮಂಡಲ ಪ್ರಧಾನ ಎ ಆರ್. ಜಯಪ್ರಕಾಶ್ ಸಾಕ್ಷರತಾ ಆಂದೋಲನ ನಡೆಸುವಂತೆ ಸಲಹೆ ಮಾಡಿ, ಮಂಡಲದಿಂದ ಸಂಘಕ್ಕೆ ಸದಾ ನೆರವು, ಸಹಕಾರ ನೀಡುವ ಭರವಸೆ ನೀಡಿದರು.

ಎ. ಡಿ ಅರವಿಂದ ಸ್ವಾಗತಿಸಿ, ವಸಂತ ಕುಮಾರ್ ವಂದಿಸಿದರು. ಶಾಲಾವನದಲ್ಲಿ ಸಸಿಗಳನ್ನು ನೆಡಲಾಯಿತು ಹಾಗೂ ಸಸಿಗಳನ್ನು ವಿತರಿಸಲಾಯಿತು.

ಪದಾಧಿಕಾರಿಗಳು : ಎ. ಡಿ. ಅರವಿಂದ (ಅಧ್ಯಕ್ಷ), ಬಿ ಜೆ. ವಿಷ್ಣುಮೂರ್ತಿ (ಉಪಾಧ್ಯಕ್ಷ), ಎ. ಕೆ. ವಸಂತ ಕುಮಾರ್ (ಕಾರ್ಯದರ್ಶಿ), ಎ. ವಿ ಸುರೇಶ್ (ಖಜಾಂಚಿ), ಬಿ. ಎನ್. ಕೈಲಾಸನಾಥ್ (ಉಪಕಾರ್ಯದರ್ಶಿ) ಹಾಗೂ ಎಚ್. ಎಸ್. ಪ್ರಕಾಶ್, ಎಚ್. ಎಸ್. ಪ್ರವೀಣ, ಎ. ಜಿ. ಶಶಿಕುಮಾರ್, ಎ. ಎಸ್. ವಿಜಯದೇವ್ (ನಿರ್ದೇಶಕರು).

ಕೊಪ್ಪ ಲಯನ್ಸ್ ಕ್ಲಬ್‌ನ ನೂತನ ಅಧ್ಯಕ್ಷರಾಗಿ ಜಿ. ಕೆ. ಪಟವರ್ಧನ್

ಕೊಪ್ಪ : ಇಲ್ಲಿನ ಲಯನ್ಸ್ ಕ್ಲಬ್‌ಗೆ ನೂತನ ಸಾಲಿನ ಅಧ್ಯಕ್ಷರಾಗಿ ಇಂಜಿನಿಯರ್/ಕಂಟ್ರಾಕ್ಟರ್ ಜಿ ಕೆ. ಪಟವರ್ಧನ್, ಕಾರ್ಯದರ್ಶಿಯಾಗಿ ಓರಿಯೆಂಟಲ್ ಇನ್ಶೂರೆನ್ಸ್ ಶಾಖಾ ಮ್ಯಾನೇಜರ್ ವಿ. ಎಂ. ಎಂ. ಸ್ವಾಮಿ ಮತ್ತು ಖಜಾಂಚಿಯಾಗಿ ವೈ. ವಿ. ಜಗದೀಶ್ ಶೆಟ್ಟಿ ಆಯ್ಕೆಯಾಗಿದ್ದಾರೆ.

ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭವನ್ನು ಲಯನ್ಸ್‌ನ 'ದೃಷ್ಟಿಯಾನ' (ಜರ್ನಿ ಫಾರ್ ಸೈಟ್) ಕಾರ್ಯಕ್ರಮದ ಜಿಲ್ಲಾಧ್ಯಕ್ಷ ಶಿರೀಶ್ ಪಿ ಗುರ್ಜರ್ ಅವರು ಜು. ೧೯ ರಂದು ನೆರವೇರಿಸಿದರು.

ಕಳೆದ ಒಂದೆರಡು ವರ್ಷಗಳಿಂದ ಸಂಸ್ಥೆಯು ತನ್ನ ಸ್ವಂತ ಕಟ್ಟಡ ನಿರ್ಮಾಣದ ಕಡೆಗೆ ಹೆಚ್ಚು ಗಮನ ನೀಡಿದ್ದು, ಈ ವರ್ಷ ಹೆಚ್ಚು ಸಾರ್ವಜನಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದೆ ಎಂದು ಅಧ್ಯಕ್ಷ ಪಟವರ್ಧನ್ ತಿಳಿಸಿದ್ದಾರೆ.

ಅಡಿಕೆ ಧಾರಣೆ

ಶಿವಮೊಗ್ಗ ೧೯-೭-೯೧

ಸರಕು : ೮೧೩೦-೮೮೨೬

ಬೆಟ್ಟೆ : ೭೧೬೯-೭೭೧೬

ಗೊರಬಲು : ೩೦೦೯-೪೪೬೯

ವಿಶ್ವ ಜನಸಂಖ್ಯಾ ದಿನಾಚರಣೆ

ಹಿರೇಕೊಡಿಗೆ : ಇಲ್ಲಿನ ಪ್ರೌಢಶಾಲೆಯಲ್ಲಿ ವಿಶ್ವ ಜನಸಂಖ್ಯಾ ದಿನವನ್ನು ಈಚೆಗೆ ಆಚರಿಸಲಾಯಿತು. ಮುಖ್ಯೋಪಾಧ್ಯಾಯರಾದ ನಾಕೂರು ಸುಬ್ರಮಣ್ಯ ಸ್ವಾಗತಿಸಿದರು. ಕ್ಷೇತ್ರ ಆರೋಗ್ಯ ಶಿಕ್ಷಕ ರೇವಣ್ಣ ಗೌಡ ಇಂದಿನ ಜನಸಂಖ್ಯಾ ಆಸ್ಫೋಟ, ಇದರಿಂದ ಆಗುವ ದುಷ್ಪರಿಣಾಮ, ಜನನ-ಮರಣಗಳ ಪ್ರಮಾಣ, ವಿಶ್ವದ ಮತ್ತು ಇಂದಿನ ನಮ್ಮ ದೇಶದ ಜನಸಂಖ್ಯೆಯ ಬೆಳವಣಿಗೆ ಮುಂತಾದ ವಿಚಾರಗಳ ಬಗ್ಗೆ ಮಾತನಾಡಿ, ವಿಶ್ವ ಜನಸಂಖ್ಯೆ ದಿನಾಚರಣೆಯ ಮಹತ್ವವನ್ನ ವಿವರಿಸಿದರು.

ಇನ್ನೊಬ್ಬ ಆರೋಗ್ಯ ಕಾರ್ಯಕರ್ತ ಬಿ ಎನ್. ರಾಮಮೂರ್ತಿ ಹೆಣ್ಣು ಮಕ್ಕಳ ವಿದ್ಯಾಭ್ಯಾಸ, ಆರೋಗ್ಯದ ಬಗ್ಗೆ ತಾರತಮ್ಯ ತೋರಬಾರದೆಂದು ತಿಳಿಸಿದರಲ್ಲದೆ, ಸಾರ್ವತ್ರಿಕ ಲಸಿಕೆ ನೀಡಿಕೆ ಬಗ್ಗೆ ಹಾಗೂ ಅತಿಸಾರ ಭೇದಿ ವಿರುದ್ಧ ಅನುಸರಿಸಬೇಕಾದ ಕ್ರಮಗಳ ಮಾಹಿತಿ ನೀಡಿದರು.

ಕೊನೆಯಲ್ಲಿ ಶಿಕ್ಷಕ ಎಂ. ಹನುಮೇಗೌಡ ವಂದಿಸಿಧರು.

ಯಡಗೆರೆ ಕ್ರೆಡಿಟ್ ಸಿಂಡಿಕೇಟ್ (ರಿ.)

ಮುಖ್ಯ ರಸ್ತೆ, ಕೊಪ್ಪ-೫೭೭೧೨೬

ಮೇಲ್ಕಂಡ ನಮ್ಮ ಸಂಸ್ಥೆಯು ತಾ|| ೧೪-೬-೧೯೯೧ ರಿಂದ ಕಾರ್ಯಾರಂಭ ಮಾಡಿರುತ್ತದೆ. ನಮ್ಮಲ್ಲಿ ಭದ್ರತೆ ಆಧಾರದ ಮೇಲೆ ಆರ್ಥಿಕ ನೆರವು ಹಾಗೂ ಆಕರ್ಷಕ ಬಡ್ಡಿ ದರದಲ್ಲಿ ಫಿಕ್ಸೆಡ್ ಡಿಪಾಜಿಟ್. ಸಿ ಡಿ., ಪಿಗ್ಮಿ ಮುಂತಾಗಿ ವಿವಿಧ ಮಾದರಿ ಧನ ಸಂಚಯ ಯೋಜನೆಗಳಿರುತ್ತವೆ. ಹೆಚ್ಚಿನ ವಿವರಗಳಿಗೆ ಸಂಸ್ಥೆಯ ಕಛೇರಿಯಲ್ಲಿ ಸಂಪರ್ಕಿಸಿರಿ

ವೈ. ಎಸ್ ತಿಮ್ಮಪ್ಪ- ವೈ. ವಿ. ಬಾಲಚಂದ್ರ,
ಮ್ಯಾನೇಜಿಂಗ್ ಪಾರ್ಟನರ್ಸ್.

ಜಮೀನು ಮಾರಾಟಕ್ಕಿದೆ

ಶೃಂಗೇರಿ ತಾಲ್ಲೂಕು ಅಡ್ಡಗದ್ದೆಗೆ ಸಮೀಪದಲ್ಲಿ 8 ಎಕರೆ ತರಿ, 10 ಎಕರೆ ಕಾಫಿ ಜಮೀನು ಮಾರಾಟಕ್ಕಿದೆ. ರಸ್ತೆ, ನೀರಾವರಿ, ಸೊಪ್ಪಿನಬೆಟ್ಟ, ಬೇಲಿ, ಆಗಳು ಇತ್ಯಾದಿ ಸೌಕರ್ಯಗಳೆಲ್ಲ ಚೆನ್ನಾಗಿವೆ. ಕಾಫಿ ಫಸಲು ಬರುತ್ತಿದ್ದು, ನಡುವೆ ಸುಮಾರು 2 ಕ್ವಿಂಟಾಲ್ ಅಡಿಕೆಯೂ ಆಗುತ್ತಿದೆ. 10 ಎಚ್ ಪಿ. ಪಂಪ್‌ಸೆಟ್ ಮಂಜೂರಾಗಿದೆ

ಆಸಕ್ತರು ಕೆಳಕಂಡಲ್ಲಿ ವಿಚಾರಿಸಿ :

ಎ. ಎಸ್. ರಾಮಣ್ಣ ಗೌಡ, ಅಣ್ಣುಕೊಡಿಗೆ,
ಅಡ್ಡಗದ್ದೆ ಅಂಚೆ, ಶೃಂಗೇರಿ ತಾ||
ಫೋನ್ : ಅಡ್ಡಗದ್ದೆ 2633.

ಸಂಪಾದಕ, ಮು[illegible] ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, [illegible] । ದೀಪಟಿಗೆ ಅಚ್ಚುಕೂಟ, ಕೊಪ್ಪ